ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ನೆನಪೋಲೆ**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/38/ವಿಜ್ಞಾನ ಅನುದಾನ/2017-18

ದಿನಾಂಕ:19.04.2018.

**ಸುತ್ತೋಲೆ**

ವಿಷಯ: ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳಿಗೆ ಬಿಡುಗಡೆ ಮಾಡಲಾಗಿರುವ ವಿಜ್ಞಾನ ಅನುದಾನ ಬಳಕೆಯ ಬಗ್ಗೆ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ದಿನಾಂಕ:21.06.2017, 05.12.2017 ಹಾಗೂ 25.01.2018ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶಗಳ ಸಂಖ್ಯೆ:ಕಾಶಿಇ/ಶೈವಿ/38/ವಿಜ್ಞಾನ ಅನುದಾನ/2017-18.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ವಿಜ್ಞಾನ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ 196 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳು ಮತ್ತು ರಾಸಾಯನಿಕ/ಕನ್ಸೂಮಬಲ್ಸ್‌ಗಳನ್ನು ಒದಗಿಸಿಕೊಳ್ಳಲು ಅಗತ್ಯವಿರುವ ಅನುದಾನವನ್ನು ಉಲ್ಲೇಖಿತ ಈ ಕಛೇರಿಯ ದಿನಾಂಕ:21.06.2017, 05.12.2017 ಹಾಗೂ 25.01.2018ರ ಆದೇಶಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಿ, ಸದರಿ ಅನುದಾನವನ್ನು ನಿಯಮಾನುಸಾರ ಬಳಸಿಕೊಂಡು 'ಹಣ ಬಳಕೆಯ ಪ್ರಮಾಣ ಪತ್ರ'ವನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆದರೆ, ಕೆಲವು ಕಾಲೇಜುಗಳ ಪ್ರಾಂಶುಪಾಲರು ಇಂದಿನವರೆಗೂ ಸದರಿ ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಮಹಾಲೇಖಪಾಲರು ಕೇಂದ್ರ ಕಛೇರಿಗೆ ಶೀಘ್ರದಲ್ಲಿಯೇ ಲೆಕ್ಕತಪಾಸಣೆ ಕೈಗೊಳ್ಳುವುದರಿಂದ ದಿನಾಂಕ:25.04.2018ರೊಳಗಾಗಿ ತುರ್ತಾಗಿ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಯ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

**ಕಾಲೇಜು ಶಿಕ್ಷಣ ನಿರ್ದೇಶಕರು**

**ಪ್ರತಿ:**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ-*ಕೂಡಲೇ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಅಗತ್ಯ ನಿರ್ದೇಶನಗಳನ್ನು ನೀಡುವಂತೆ ಸೂಚಿಸಲಾಗಿದೆ.*
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾ.ತಂ.ವಿ. - ಸದರಿ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3) ಕಛೇರಿ ಪ್ರತಿ.